ಜೆ.ಆರ್.ಆದಿನಾರಾಯಣಮುನಿ, ಬೆಂಗಳೂರು

*ಈಗಿನ ಹುಡುಗಿಯರ heart ಬಹಳ weak ಅಂತೆ?*




ಅದು weak ಅಲ್ಲ, week! weekly basis ಮೇಲೆ ಒಂದೆಡೆಯಿಂದ ಒಂದೆಡೆಗೆ ಜಂಪ್ ಆಗುತ್ತದೆ!

ಸಡ್ಲಪಲ್ಲಿ ರಾಮಕೃಷ್ಣಾರೆಡ್ಡಿ, ಯಲಹಂಕ

*ಬೆಂಗಳೂರು ಮತ್ತು ಮಂಗಳೂರು ನಗರಗಳಿಗೆ ಇರುವ ವ್ಯತ್ಯಾಸವೇನು?*

ಮಂಗಳೂರು ಬಿಸಿ, ಬೆಂಗಳೂರು busy.

ಪೇಂಟರ್ ಪಾಪು, ಸಂತೇಮರಹಳ್ಳಿ

*ದುಃಖಕ್ಕೆ ಕಣ್ಣೀರು ಬರುವುದು ಸಹಜ; ಆದರೆ ಸಂತೋಷಕ್ಕೂ ಕಣ್ಣಲ್ಲಿ ನೀರು ಬರುವುದು ಏಕೆ?*

ಹಳೆಯ ದುಃಖದ ಕಣ್ಣೀರಿನ ಕರೆಗಳನ್ನು ತೊಳೆದು ಹಾಕಲಿಕ್ಕೆ!

ಎಂ.ಎಸ್.ಧರ್ಮೇಂದ್ರ, ಜಿಟಿಆರ್ಇ ಕ್ಯಾಂಪಸ್

*ಊರಿಗೆ ಉಪಕಾರಿಯಾದ ಎಷ್ಟೋ ಪತಿ ಮಹಾಶಯರು ಹೆಂಡತಿಗೆ ಒಳ್ಳೆಯ ಗಂಡನಾಗದಿರಲು ಕಾರಣವೇನು?*



ಸೂರ್ಯನೇ ಹಾಗೆ; ಜಗಕ್ಕೆ ಬೆಳಕು, ಒಳಗೆ ಬರೀ ಕೆಂಡ, ಬೂದಿ!

ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ

*ಎಲ್ಲವೂ ಒಂದು ರೂಗೆ ಸಿಗುವಂತಾದರೆ ನಾವು ಕೆಲಸ ಮಾಡುವುದಾದರೂ ಏತಕ್ಕೆ ರಾಂಜಿ?*

ಎಲ್ಲವೂ ಒಂದು ರೂಗೆ ಸಿಕ್ಕ ದಿವಸ ಸಂಬಳ ಎಂಟಾಣೆಯಾಗುವ ಏಕೈಕ ಕಾರಣ!

ಮೊಳಕಾಲ್ಮೂರು ಸುರೇಶ, ಬಳ್ಳಾರಿ

*ಅಲ್ರಣ್ಣ, ಸವೆದುಹೋಗುತ್ತಿರುವ ಆಯುಷ್ಯಕ್ಕೆ ಔಷಧ ಇದೆಯೆ?*

ಆಯುಷ್ಯ ಸವೆದು ಸಾಯಲಿ, ಅದನ್ನು ದೇಹಕ್ಕೆ ಮಾತ್ರ ಸೀಮಿತಗೊಳಿಸಿ ಮನಸ್ಸಿಗೆ ತಟ್ಟದಂತಿಟ್ಟರಾಯ್ತು!

ನಾಗರಾಜ್ ಬಾಯರಿ, ಶಿವಮೊಗ್ಗ

*ಕುಳಿತು ಉಂಡರೆ ಕುಡಿಕೆ ಹೊನ್ನು ಸಾಲದು. ನಿಂತು ಉಂಡರೆ..?*

ಸಾಂಬಾರ್ಕರೆ, ಕಾಫಿಕರೆ, ಚಟ್ನಿಕರೆಗಳಿಂದ ಸೋಪು ಖರ್ಚು ಹೆಚ್ಚುದು!

ಓಂಚನ್ನೇಶ್, ಅರಬಿಳಚಿ ಕ್ಯಾಂಪ್

*ತಲೆಯಲ್ಲಿ ಕೂದಲು ಇಲ್ಲದವರಿಗೆ ಬಾಂಡ್ಲಿ ಅಂತಾರಲ್ಲಾ, ಯಾಕೆ?*

ಅನಿತೇ ಥಳಥಳ, ಅನಿತೇ ನುಣ್ಣು, ಅಲ್ಲಲ್ಲಿ ನಜ್ಜುಗುಜ್ಜು, ಬಾಂಡ್ಲಿಯ ಪಿಡಿವೋಲ್ ಅತ್ತಿತ್ತ ಕರ್ಣಂಗಳಿರಲ್ ಇನ್ನಾವುದಕೆ ಸಾದೃಶಮದು ಪೇಳ್ ಚನ್ನೇಶ!

ಸವಿತ ಕೆ, ಕೊಡಸೋಗೆ

*ಕಾಸಿಲ್ಲದ ಬಡವರನ್ನು ಕಸದಂತೆ ಕಾಣುವವರಿಗೆ ಏನು ಮಾಡಬೇಕು ಪ್ರಭು?*

ಪೊರ್ಕೆಯ ಧೋರಣೆ ತೋರಿಸಿ ಪಕ್ಕಕ್ಕೆ ತಳ್ಳಿ ಮುಂದೆ ಸಾಗಬೇಕು.

ಬಸವನಗೌಡ ಹೆಬ್ಬಳಗೆರೆ, ಚನ್ನಗಿರಿ

*ಒಂದೊಮ್ಮೆ ಜಗತ್ತಿನ ಎಲ್ಲಾ ವ್ಯಕ್ತಿಗಳೂ ಒಳ್ಳೆಯವರಾಗಿದ್ದರೆ...?*

ರಾಮಾಯಣವೇ ಇರುತ್ತಿರಲಿಲ್ಲ!

ಶೋಭಾ ಎಂ.ಆರ್, ಮರ್ಕುಲಿ

*ಇಲ್ಲೊಬ್ಬ ಸಾಲ ಮಾಡಿ ವಿಷ ಕುಡಿದು ಹೆಂಡತಿ ಮಕ್ಕಳನ್ನು ಬೀದಿಪಾಲು ಮಾಡಿರುವನಲ್ಲಾ...?*

ಜೋಡೆತ್ತಿನ ಬಂಡಿಯಲ್ಲಿ ಒಂದು ಎತ್ತು ಹೋದರೆ ಬಂಡಿ ನಿಂತೀತೆ? ಒಂಟೆತ್ತಿಗೇ ನೊಗವೇರಿಸಿ. ಮುಂದೆ ದಾರಿ ಇದ್ದೇ ಇದೆ.

ಮಲ್ಲೇಶ ಕೆ. ಗುಂಡ್ಲುಪೇಟೆ

*ಮಹಿಳೆಯರಿಗೆ 100% ಮೀಸಲಾತಿ ಕೊಟ್ಟರೆ?*

ಇದ್ದೇ ಇದೆಯಲ್ಲಾ! ಆಭರಣಗಳ ಅಂಗಡಿ, ಸೀರೆ ಅಂಗಡಿ, ಬ್ಯೂಟಿ ಪಾರ್ಲರ್‌ಗಳಲ್ಲಿ!

ಎನ್.ಆರ್. ಭಾದ್ರಿ, ಬೆಂಗಳೂರು

*ಕರುಣೆಗೂ, ಪ್ರೀತಿಗೂ ಏನು ವ್ಯತ್ಯಾಸ?*

ಕರುಣೆ ಒನ್ ವೇ, ಪ್ರೀತಿ ಟೂ ವೇ!

## ಬಹುಮಾನಿತ ಪ್ರಶ್ನೆ

ಎಸ್. ಪ್ರಭಾ, ಬೆಂಗಳೂರು

*ಕಾವೇರಿ ಸಮಸ್ಯೆ ಹುಟ್ಟುಹಾಕಿದ್ದೇ ಬ್ರಿಟಿಷರು. ಈಗ ಅದರ ತೀರ್ಮಾನಕ್ಕೂ ಅವರನ್ನೇ ಕರೆಸಿದರೆ...?*

ಒಳ್ಳೇ ಕಥೆ ನಿಮ್ದು. ನಿಮ್ಮ ಮನೆಯ ರೇಡಿಯೋ ಕೆಟ್ಟರೆ ಮಾರ್ಕೋನಿಯನ್ನು ಕರೆಸುತ್ತೀರೇನು?

ಜೆ. ಪ್ರದೀಪ ಕುಮಾರ, ಹೂವಿನಹಡಗಲಿ

*ಮನುಷ್ಯ- ಮನುಷ್ಯ ಸಂಬಂಧಕ್ಕೂ, ಮನುಷ್ಯ- ಪ್ರಾಣಿ ಸಂಬಂಧಕ್ಕೂ ಏನು ವ್ಯತ್ಯಾಸ?*

ಒಂದು ನೌಕರ– ನೌಕರರದು, ಇನ್ನೊಂದು ನೌಕರ–ಬಾಸ್‌ರದು!

ಆರ್. ಮಧುಸೂದನ್, ಹಾಸನ

*ಸರಸ- ವಿರಸ ಪದಗಳ ಮೊದಲ ಅಕ್ಷರಗಳನ್ನು ಸೇರಿಸಿದರೆ ಸವಿ ಎಂದಾಗುತ್ತದೆ. ಹೀಗಿರುವಾಗ ಈ ಎರಡು ಪದಗಳು ವಿರುದ್ಧ ಪದಗಳಾಗಲು ಕಾರಣವೇನು?*

ಸೇರುವುದು ಎಂದೂ ತುದಿ– ಮೊದಲೇ. ಸ–ವಿ ಕಳೆದ ನಂತರ ಇಲ್ಲಿ ಸರ, ಅಲ್ಲಿ ರಸ; ಕ್ರಮವೇ ಉಲ್ಟಾ ಉರುಫ್ ವಿರುದ್ಧ ಆಯಿತಲ್ಲಾ!

ಬಿ.ಎಂ. ಪರಶಿವಮೂರ್ತಿ, ಬೆಂಗಳೂರು

*ಗಂಡನಾದವನು ಹೆಂಡತಿಯ ಬಳಿ ಹೇಳಬಾರದಾದ ತುಂಬಾ ಟಾಪ್ ಸೀಕ್ರೆಟ್ ವಿಷಯ ಯಾವುದು?*



ಮೇಕಪ್ ಇಲ್ಲದ ಅವಳ ಮುಖ ನೋಡಲು ಭಯವಾಗುವುದೆಂಬ ವಿಷಯ!

ಪಿ.ಜೆ. ರಾಘವೇಂದ್ರ, ಮೈಸೂರು

*ನದೀಮೂಲ, ಋಷಿಮೂಲ ಓಕೆ, ನಟೀಮೂಲ ಯಾಕೆ?*

ನಕಾರಾತ್ಮಕ ಟೀಕೆಗೆ! ಓಟೆಯ ಮೌಲ್ಯ ತಿಳಿಯದವರಿಗೆ ಗಾಸಿಪ್ಪಿನ ಸಿಪ್ಪೆಯೇ ರಮ್ಯ!

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ

*ಹೆಣ್ಣಿನ ಜೀವಕ್ಕೆ ಯಾವಾಗ ಬೆಲೆ ಸಿಗುತ್ತದೆ?*

ಅವಳ ಹೆಸರಿನಲ್ಲಿ ಎಲ್ಐಸಿ ಪಾಲಿಸಿ ಮಾಡಿಸಿದಾಗ!

■ ರಾಮ್